ಕರ್ನಾಟಕ ವಿಧಾನಸಭೆ

ಗುರುವಾರ 25ನೇ ಜುಲೈ 2002ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ.ವಿ. ವೆಂಕಟಪ್ಪ) ರವರು,

ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ರಾಜ್ಯದಲ್ಲಿ ಚಿನ್ನದ ಲೇಪನವಿರುವ ಗಣಿಗಳ ಸಂಖ್ಯೆ ಹಾಗೂ ಲಾಭ-ನಷ್ಟದ ವಿವರಗಳು

181(1626) ಶ್ರೀ ಚಂದ್ರಪ್ಪ ಎಂ. (ಭರಮಸಾಗರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಚಿನ್ನದ ಲೇಪನ ಇರುವ ಗಣಿಗಳ ಸಂಖ್ಯೆ ಎಷ್ಟು?

ಆ) ಈ ಗಣಿಗಳಲ್ಲಿ ಖಾಯಂ ಆಗಿ ಕೆಲಸ ಮಾಡುವವರ ಸಂಖ್ಯೆ ಎಷ್ಟು?

ಇ) 2000-01, 2001-02ಕ್ಕೆ ಕೊನೆಗೊಂಡಂತೆ ಈ ಗಣಿಗಳ ಲಾಭ ನಷ್ಟದ ವಿವರ ನೀಡುವುದು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ರಾಜ್ಯದಲ್ಲಿ ಚಿನ್ನದ ಲೇಪನ ಇರುವ ಗಣಿಗಳ ಸಂಖ್ಯೆ : 6.

ರಾಯಚೂರು ಜಿಲ್ಲೆ	-	03
ಗುಲ್ಬರ್ಗಾ ಜಿಲ್ಲೆ	-	01
ತುಮಕೂರು ಜಿಲ್ಲೆ	-	01
ಕೋಲಾರ ಜಿಲ್ಲೆ	-	01

ಆ) 3958

ಇ) 2000-01ರಲ್ಲಿ ರೂ. 634-00 ಲಕ್ಷ ಹಾಗೂ 2001-02ರಲ್ಲಿ ರೂ. 633-00 ಲಕ್ಷ ನಷ್ಟ ಅನುಭವಿಸಿದೆ.

ಶ್ರೀ ಎಂ.ಚಂದ್ರಪ್ಪ:- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಚಿನ್ನದ ಲೇಪನ ಇರುವ ಘಟಕಗಳು ಎಷ್ಟು ಎಂದು ಕೇಳಿದ್ದಕ್ಕೆ ಅವರು 6 ಎಂದು ಹೇಳಿದ್ದಾರೆ. ಆದರೆ ಚಿತ್ರದುರ್ಗ ಜಿಲ್ಲೆಯಲ್ಲಿರತಕ್ಕಂಥ ತಾಮ್ರದ ಗಣಿಯಲ್ಲಿ ಚಿನ್ನವನ್ನು ತಯಾರು ಮಾಡತಕ್ಕಂಥ ಮೆಷಿನ್‌ನನ್ನು ಈಗಾಗಲೇ ಇಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ತಾಮ್ರದ ಗಣಿ ಬಿಟ್ಟು ಚಿನ್ನದ ಲೇಪನದ ಗಣಿ ಸಿಕ್ಕುವುದಿಲ್ಲವೇ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕಾಗುತ್ತದೆ.

ಶ್ರೀ ವಿ. ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ನಾವು ಹಟ್ಟಿ ಚಿನ್ನದ ಗಣಿಯಿಂದ ಚಿನ್ನವನ್ನು ಮಾತ್ರ ಸಂಸ್ಕರಣೆ ಮಾಡುತ್ತಿದ್ದೇವೆ. ತಾಮ್ರದ ಬಗ್ಗೆ ನಾವು ಮುಂದಿನ ಯೋಚನೆಯನ್ನು ಇಟ್ಟುಕೊಂಡಿದ್ದೇವೆ, ತಾಮ್ರದ ನಿಕ್ಷೇಪವನ್ನು ನಾವು ಯಾವರೀತಿಯಾಗಿ ಬಳಸಬೇಕು? ಅದನ್ನು ಹೇಗೆ ಉಪಯೋಗ ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಸಮೀಕ್ಷೆ ನಡೆಯುತ್ತಿದೆ.

ಶ್ರೀ ಎಂ.ಚಂದ್ರಪ್ಪ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಚಿತ್ರದುರ್ಗದಲ್ಲಿ ಚಿನ್ನವನ್ನು ತಯಾರು ಮಾಡತಕ್ಕಂಥ ವ್ಯವಸ್ಥೆ ನಡೆಯುತ್ತಿದೆ. ಚಿನ್ನದ ಗಣಿ ಇರತಕ್ಕಂಥ ತುಮಕೂರು ಜಿಲ್ಲೆಯಿಂದ ಲಾರಿಗಳ ಮೂಲಕ ಲೇಪನವನ್ನು ತೆಗೆದುಕೊಂಡು ಬಂದು ಸುಮಾರು 4-5 ವರ್ಷಗಳಿಂದ ಚಿನ್ನವನ್ನು ತಯಾರು ಮಾಡತಕ್ಕಂಥ ವ್ಯವಸ್ಥೆ ಇದೆ. ಮಾನ್ಯ ಸಚಿವರು ಉತ್ತರದಲ್ಲಿ ಪ್ರತಿವರ್ಷ ಆರೂವರೆ ಕೋಟಿ ರೂಪಾಯಿಗಳ ಲಾಸ್‌ನ್ನು ತೋರಿಸುತ್ತಾ ಇದೆ ಎಂದು ಹೇಳಿದ್ದಾರೆ. ಲಾರಿಯಿಂದ ತರತಕ್ಕಂಥ ಗಣಿಗಳನ್ನು ಅಲ್ಲಿ ಕ್ರಷರ್ ಮಾಡುವುದರಿಂದ ಲಾಸ್ ಆಗುತ್ತದೆಂದು ಮತ್ತು ಅದರಿಂದ ಸರ್ಕಾರಕ್ಕೆ ಹೊರೆಯಾಗುತ್ತದೆಂಬುದು ನನ್ನ ಪ್ರಶ್ನೆಯಾಗಿದೆ.

ಶ್ರೀ ವಿ.ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಚಿತ್ರದುರ್ಗದಲ್ಲಿರುವ ನಿಕ್ಷೇಪದ ಡೆಪಾಸಿಟ್ ಹಣ ಬಹಳ ಕಡಿಮೆ ಇದ್ದು, ಅದರಿಂದ ಆಗತಕ್ಕಂಥ ಖರ್ಚು, ಅದರ ಉತ್ಪಾದನೆಗೆ ಹೋಲಿಕೆಯನ್ನು ಮಾಡಿದಾಗ ನಷ್ಟ ಅನುಭವಿಸುತ್ತಿದೆ. ಆದ್ದರಿಂದ ಅಲ್ಲಿರತಕ್ಕಂಥ ಒಂದು ವಿಂಗ್‌ನ್ನು ನಾವು ಹಟ್ಟಿಗೆ ಶಿಫ್ಟ್ ಮಾಡಿದ್ದೇವೆ, ಅದನ್ನು ವಯಾಬಲ್ ಆಗಿ ಮಾಡಬೇಕೆನ್ನುವ ಬಗ್ಗೆ ಒಂದು ಪ್ರಯತ್ನ ಹಟ್ಟಿ ಚಿನ್ನದ ಗಣಿ ಬಗ್ಗೆ ನಡೆಯುತ್ತಿದೆ. ಈಗಾಗಲೇ ಅಲ್ಲಿ ನಷ್ಟವಾಗುತ್ತಿರುವುದರಿಂದ ವಿಆರ್‌ಎಸ್ ಕೊಟ್ಟು 351 ಕಾರ್ಮಿಕರನ್ನು ಕಳುಹಿಸಿಕೊಡುವ ಪ್ರಯತ್ನವಾಗುತ್ತಿದೆ. ಅದನ್ನು ಮುಂದಿನ ದಿನಗಳಲ್ಲಿ ಉಪಯೋಗ ಮಾಡಿಕೊಳ್ಳುತ್ತೇವೆ, ಅದನ್ನು ಪೂರ್ತಿ ಬಿಡುವುದಿಲ್ಲ; ಸದ್ಯಕ್ಕೆ ನಷ್ಟವಾಗುತ್ತಿರುವುದರಿಂದ ಅದನ್ನು ನಿಲ್ಲಿಸಿ, ಎಲ್ಲಿ ಹೆಚ್ಚಿಗೆ ಲಾಭ ಬರುತ್ತದೆ ಅಲ್ಲಿ ಅದನ್ನು ಜಾಸ್ತಿ ಉತ್ಪಾದನೆ ಮಾಡತಕ್ಕಂಥ ವ್ಯವಸ್ಥೆಯನ್ನು ಕಳೆದ ಎರಡು ವರ್ಷಗಳಿಂದ ನಾವು ಮಾಡುತ್ತಿದ್ದೇವೆ.

ಶ್ರೀ ಎಂ.ಚಂದ್ರಪ್ಪ:- ಮಾನ್ಯ ಅಧ್ಯಕ್ಷರೆ, ಬಹಳ ಆಳದಿಂದ ತಾಮ್ರವನ್ನು ತೆಗೆಯತಕ್ಕಂಥ ವ್ಯವಸ್ಥೆ ಈಗಾಗಲೇ ಆಗಿದೆ. ಚಿತ್ರದುರ್ಗದ ಸುತ್ತಮುತ್ತ 25 ಕಿ.ಮೀ ಅಂತರದಲ್ಲಿ 400-500 ಫೂಟ್ ಬೋರ್‌ವೆಲ್ ಕೊರೆದರೂ ಕೂಡ ನೀರು ಬರತಕ್ಕಂಥ ವ್ಯವಸ್ಥೆ ಇಲ್ಲ. ಚಿನ್ನದ ಲೇಪನ ಇಲ್ಲದಿರುವ ಕಡೆ ಚಿನ್ನ ತಯಾರು ಮಾಡತಕ್ಕಂಥ ವ್ಯವಸ್ಥೆಯಿಂದ ಪರಿಸರಕ್ಕೆ ತೊಂದರೆಯಾಗಿ ಇವತ್ತು ಬಹಳಷ್ಟು ಮಳೆ ಇಲ್ಲದ ಪರಿಸ್ಥಿತಿಯಾಗಿದೆ. ಅಲ್ಲಿ ಸುಮಾರು 5-6 ವರ್ಷಗಳಿಂದ ಯಾವುದೇ ಬೆಳೆ ಬೆಳೆಯದಂತಹ ಪರಿಸ್ಥಿತಿಯಾಗಿದ್ದು, ಆ ಧೂಳಿನಿಂದ ಎಲ್ಲಾ ತೋಟಗಳು ಮುಟ್ಟಿಕೊಂಡು ಹೋಗಿವೆ. ಆ ದೃಷ್ಟಿಯಿಂದ ಚಿನ್ನದ ಲೇಪನ ಇಲ್ಲದ ಕಡೆ ಚಿನ್ನವನ್ನು ತಯಾರು ಮಾಡುವ ಬದಲಾಗಿ, ಸರ್ಕಾರಕ್ಕೆ ಉಳಿತಾಯವಾಗುವುದರಿಂದ ಅದನ್ನು ನೀವು ತುಮಕೂರಿಗೆ ಏಕೆ ಶಿಫ್ಟ್ ಮಾಡಬಾರದು ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಶ್ರೀ ವಿ.ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಇದಕ್ಕೆಲ್ಲಾ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಇದೆ ಸ್ವಾಮಿ, ಪೊಲ್ಯೂಷನ್ ಕಂಟ್ರೋಲ್ ಬೋರ್ಡಿನವರು ಪ್ರತಿವರ್ಷ ಸಮೀಕ್ಷೆ ಮಾಡುತ್ತಾರೆ. ಪರಿಸರಕ್ಕೆ ಆಗತಕ್ಕಂಥ ಧಕ್ಕೆಯನ್ನು ಪರಿಶೀಲನೆ ಮಾಡಿ ಸಂಬಂಧಪಟ್ಟಂಥ ಕಂಪನಿಗೆ ಅವರು ಸೂಚನೆಯನ್ನು ಕೊಡುತ್ತಾರೆ; ಮಂಜಾಗ್ರತೆಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ಸೂಚನೆಯನ್ನು ಕೊಡುತ್ತಾರೆ, ಅದರ ಪ್ರಕಾರ ನಾವು ಅನುಸರಿಸುತ್ತೇವೆ. ಅದು ಅಷ್ಟೊಂದು ನೆಗ್ಲೆಕ್ಟ್ ಆಗಿದ್ದರೆ ನಾನು ಪೊಲ್ಯೂಷನ್ ಕಂಟ್ರೋಲ್ ಬೋರ್ಡಿಗೆ ಅಲ್ಲಿ ಸಮೀಕ್ಷೆ ಮಾಡುವುದಕ್ಕೆ ನಾನು ಸೂಚನೆಯನ್ನು ಕೊಡುತ್ತೇನೆ.

ಶ್ರೀ ಎಂ.ಚಂದ್ರಪ್ಪ:- ತುಮಕೂರಿಗೆ ಶಿಫ್ಟ್ ಮಾಡುವುದನ್ನು ಬಿಟ್ಟು, ಪೊಲ್ಯುಷನ್ ಕಂಟ್ರೋಲ್ ಬೋರ್ಡಿಗೆ ಹೇಳುತ್ತೇನೆ, ಅವರು ಸರಿ ಮಾಡುತ್ತಾರೆಂದು ಹೇಳುವುದು, ಇದು ಸರಿಯಾದುದಲ್ಲ. ಚಿತ್ರದುರ್ಗದಿಂದ ಶಿಫ್ಟ್ ಮಾಡಿ ಅದನ್ನು ತುಮಕೂರಿಗೆ ಕೊಟ್ಟು ಬಿಡಿ, ಎಲ್ಲಿ ಮೈನಿಂಗ್ ಇರುತ್ತದೆ ಅಲ್ಲಿ ಮಾಡುತ್ತಾರೆಯೇ ಹೊರತು ಸುಮಾರು ನೂರಾರು ಕಿ.ಮೀ. ದೂರದಿಂದ ಲಾರಿಯಲ್ಲಿ ತೆಗೆದುಕೊಂಡು ಬರುವುದರಿಂದ, ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಲಾರಿಗಳೂ ಕೂಡ ಬಹಳಷ್ಟು ಓಡಾಡುವುದರಿಂದ ಆಕ್ಸಿಡೆಂಟ್‌ಗಳು ಜಾಸ್ತಿಯಾಗುತ್ತವೆ; ಆದ್ದರಿಂದ ನಮ್ಮ ಸರ್ಕಾರಕ್ಕೆ ಜಾಸ್ತಿ ಹೊರೆಯಾಗುತ್ತದೆ; ಅನ್‌ನೆಸೆಸರಿ ಅವ್ಯವಹಾರವಾಗುವುದಕ್ಕೆ ಅವಕಾಶವನ್ನು ಕೊಡಬೇಡಿ, ನಾವು ಈಗ ಬಹಳಷ್ಟು ರಸ್ತೆಗಳನ್ನು ಮಾಡಿಸಿದ್ದೇವೆ, ಅವೆಲ್ಲಾ ಹಾಳಾಗಿ ಹೋಗಿವೆ, ಎಲ್ಲಿ ನಿಕ್ಷೇಪ ಸಿಗುತ್ತದೆ ಅಲ್ಲಿಗೆ ಶಿಫ್ಟ್ ಮಾಡಿಸುವ ವ್ಯವಸ್ಥೆ ತಮ್ಮಿಂದ ಆಗಬೇಕು.

ಶ್ರೀ ವಿ.ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಅವರು ಹೇಳಿದಂತೆ ಸಂಸ್ಕರಣ ಘಟಕ ಇರುವುದು ಚಿತ್ರದುರ್ಗ ಹಾಗೂ ಹಟ್ಟಿಯಲ್ಲಿ ಇದೆ. ನಿಕ್ಷೇಪ ಸಿಕ್ಕತಕ್ಕಂಥಾದ್ದು, ಅದು ದೂರ ಇರತಕ್ಕಂಥಾದ್ದೂ ನಿಜ, ಅದರಿಂದ ಸಂಸ್ಥೆಗೆ ಬಹಳಷ್ಟು ನಷ್ಟವಾಗುತ್ತಿದೆ; ಆದ್ದರಿಂದ ಅದನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಉತ್ಪಾದನೆಯನ್ನು ಕಡಿಮೆ ಮಾಡಿ ಎಲ್ಲಿ ಜಾಸ್ತಿ ನಿಕ್ಷೇಪ ಸಿಗುತ್ತದೆ ಅಲ್ಲಿ ಸಂಸ್ಕರಣವನ್ನು ಜಾಸ್ತಿ ಮಾಡಬೇಕೆನ್ನುವ ತೀರ್ಮಾನ ಮಾಡಿ ಕಂಪನಿಯವರು ನಷ್ಟವನ್ನು ಕಡಿಮೆ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಶ್ರೀ ಎಂ.ಚಂದ್ರಪ್ಪ:- ಮಾನ್ಯ ಅಧ್ಯಕ್ಷರೆ, ನಮಗೆ ಬದಲಾವಣೆ ಮಾಡಿದರೆ ಸಾಕು, ಎಷ್ಟು ದಿವಸಗಳಲ್ಲಿ ಮಾಡುತ್ತಾರೆಂದು ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರವನ್ನು ಹೇಳಬೇಕು.

ಶ್ರೀ ವಿ.ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಸಂಬಂಧಪಟ್ಟ ಕಂಪನಿಯವರ ಜೊತೆಯಲ್ಲಿ ಚರ್ಚೆ ಮಾಡಿ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು, ರಾಜ್ಯದಲ್ಲಿ ಚಿನ್ನದ ಲೇಪನದ ಗಣಿಗಳು ಎಷ್ಟು ಎಂದು ಹೇಳಿದರೆ, ರಾಯಚೂರು, ತುಮಕೂರು, ಕೋಲಾರ ಗುಲ್ಬರ್ಗಾ ಇಷ್ಟನ್ನು ಹೇಳಿದ್ದಾರೆ. ಗದಗ ಜಿಲ್ಲೆಯ ನನ್ನ ಕ್ಷೇತ್ರದಲ್ಲಿಯೇ ಅದು ಇದೆ, ಅದನ್ನು ಇಲ್ಲಿ ಹೇಳಿರುವುದಿಲ್ಲ.

ಶ್ರೀ ವಿ.ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಅದು ಇನ್ನೂ ಕೂಡ ಉತ್ಪಾದನೆ ಮಾಡುತ್ತಿಲ್ಲ, ಈಗಾಗಲೇ ನಡೆಯುತ್ತಿರುವ ಗಣಿಗಳ ಬಗ್ಗೆ ಮಾತ್ರ ನಾವು ಉತ್ತರವನ್ನು ಕೊಟ್ಟಿರುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಉತ್ಪಾದನೆಯನ್ನು ಪ್ರಾರಂಭ ಮಾಡಿ ಹಟ್ಟಿ ಚಿನ್ನದ ಗಣಿಯವರು ಅದನ್ನು ತೆಗೆದುಕೊಂಡು ಹೋಗಿ ಅಳನ್ನು ಇಟ್ಟು ದುಡ್ಡು ಖರ್ಚು ಮಾಡುತ್ತಿದ್ದಾರೆ, ಇದರ ಬಗ್ಗೆ ನಾನು ಹಿಂದೆ ಒಂದು ಪ್ರಶ್ನೆಯನ್ನು ಹಾಕಿದ್ದೆ. ಅದು ಇದೆ ಎಂದು ಕನಿಷ್ಟ ಅವರ ಉತ್ತರದಲ್ಲಿಯಾದರೂ ಹೇಳಬೇಕಾಗಿತ್ತು. ಅಲ್ಲಿ ಇಲ್ಲವೆನ್ನುವ ಅರ್ಥದಲ್ಲಿ ಹೇಳುತ್ತಿದ್ದಾರೆ; ಗದಗ ಜಿಲ್ಲೆಯಲ್ಲಿ ಅದು ನೂರಾರು ವರ್ಷಗಳ ಹಿಂದಿನಿಂದ ಇದೆ, ಅದನ್ನು ಮೊನ್ನೆ ಚಾಲು ಮಾಡಿದ್ದೀರಿ. ಆ ಬಗ್ಗೆ ಉತ್ತರದಲ್ಲಿ ಹೇಳಬೇಕಿತ್ತು. ಅದು ಉತ್ತರದಲ್ಲಿ ಇಲ್ಲವೇ ಇಲ್ಲ.

ಶ್ರೀ ವಿ.ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಹಾಲಿ ಚಾಲ್ತಿಯಲ್ಲಿರುವ ಗಣಿಗಳ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದೇನೆ. ನಮ್ಮ ಅಧಿಕಾರಿಗಳ ಮಾಹಿತಿ ಪ್ರಕಾರ ನಾವು ಗದಗದಲ್ಲಿ ಯಾವುದೇ ಗುತ್ತಿಗೆಯನ್ನು ಕೊಟ್ಟಿಲ್ಲ ಸ್ವಾಮಿ.